ದಿಃ 28-06-2023 ರಂದು ಸಾಕ್ಷಿಯನ್ನು ಕರೆಯಿಸಿ ಪ್ರಮಾಣ ವಚನ ಭೋಧಿಸಲಾಯಿತು.
**ಮುಂದುವರೆದ ಪಾಟೀ ಸವಾಲು ವಾದಿ ಪರ ವಕೀಲರಾದ ಶ್ರೀ ಬಿ.ಆರ್.ಎನ್. ರವರಿಂದಃ-**

ನಾನು ಆಸ್ತಿ ದಾವೆಗೆ ಸಂಬಂಧಪಟ್ಟಂತೆ ಸಾಕ್ಷಿ ನುಡಿಯಲು ಬಂದಿರುತ್ತೇನೆ. ಈ ದಾವೆಯಲ್ಲಿ ನಮ್ಮ ಪ್ರತಿವಾದ ಪತ್ರವನ್ನು ಸಲ್ಲಿಸಿರುತ್ತೇನೆ . ನಾನು ಯಾವುದೇ ಪ್ರತಿವಾದ ಪತ್ರವನ್ನು ಈ ದಾವೆಯಲ್ಲಿ ಸಲ್ಲಿಸಿರುವುದಿಲ್ಲ ಎಂದರೆ ಸರಿಯಲ್ಲ. ನಾನು ಈ ದಾವೆಯಲ್ಲಿ ನನ್ನ ಒಬ್ಬರ ಸಲುವಾಗಿ ಮಾತ್ರ ಸಾಕ್ಷಿ ನುಡಿಯುತ್ತಿದ್ದೇನೆ ಎಂದರೆ ಸರಿ . ದಾವಾ ಆಸ್ತಿಯ ಸರ್ವೆ ನಂ.86/12 ಮಾತ್ರ ಗೊತ್ತು, ಉಳಿದ ಆಸ್ತಿಗಳ ಸಂಖ್ಯೆ ನನಗೆ ಗೊತ್ತಿಲ್ಲ. ದಾವಾ ಆಸ್ತಿಗಳು ಯಾರ ಸ್ವಾಧೀನದಲ್ಲಿರುತ್ತವೆ ಎಂದರೆ ಸಾಕ್ಷಿಯು ನಾವೇ ಸ್ವಾಧೀನದಲ್ಲಿರುತ್ತೇವೆ ಎಂದು ನುಡಿಯುತ್ತಾರೆ. ದಾವಾ ಆಸ್ತಿಗಳಲ್ಲಿ ಏನು ಬೆಳೆ ಬೆಳೆಯುತ್ತೀರಿ ಎಂದರೆ ಸಾಕ್ಷಿಯು ಭತ್ತ, ಮೆಣಸಿನಕಾಯಿ, ಬಟಾಟಿ ಬೆಳೆಯುತ್ತೇವೆ ಎಂದು ನುಡಿಯುತ್ತಾರೆ. ಸದರಿ ಬೆಳೆಗಳನ್ನು ಮಾರಾಟ ಮಾಡಿದ ಬಗ್ಗೆ ಬಿಲ್ಲುಗಳು ಇವೆಯೇ ಎಂದರೆ ಸಾಕ್ಷಿಯು ನಾವು ಮಾರಾಟ ಮಾಡುವುದಿಲ್ಲ, ಕೇವಲ ಮನೆಗೆ ಮಾತ್ರ ಬೆಳೆಯುತ್ತೇವೆ ಎಂದು ನುಡಿಯುತ್ತಾರೆ.

**2.** ನಮ್ಮ ತಂದೆಗೆ ಒಟ್ಟು 4 ಜನ ಮಕ್ಕಳುಗಳು, ಅವರುಗಳೆಂದರೆ ಕಲ್ಲಪ್ಪ, ಭೀಮರಾವ್, ಶಂಕರ್ ಮತ್ತು ನಾನು . ನಮ್ಮ ತಂದೆಯವರು 1973 ರಲ್ಲಿ ಮೃತರಾಗಿರುತ್ತಾರೆ. ನಮ್ಮ ತಂದೆಯವರು ಮೃತರಾದ ನಂತರ ನಮ್ಮ ಕುಟುಂಬದ ಆಸ್ತಿಗಳಲ್ಲಿ ಪಾಲಾಗಿರುತ್ತವೆ ಎಂದರೆ ಸರಿ ಯಲ್ಲ. ನಿಡಿ.1 ರಲ್ಲಿ ಸಹಿಯನ್ನು ಮಾಡಿರುತ್ತೀರಾ ಎಂದರೆ ಸಾಕ್ಷಿಯು ನಿಡಿ-1 ರ ದಾಖಲೆಯನ್ನು ನೋಡಿ ಪರಿಶೀಲಿಸಿ ಅದರಲ್ಲಿರುವ ಸಹಿ ನನ್ನದು ಎಂದು ನುಡಿಯುತ್ತಾರೆ. ಅದೇ ರೀತಿ ನಿಡಿ-1 ರಲ್ಲಿ ಉಳಿದ ಸಹಿಗಳು ನನ್ನ ಸಹೋದರರ ಸಹಿಗಳು . 1992 ರಂದು ನಮ್ಮ ಕುಟುಂಬದಲ್ಲಿ ಪಾಲು ವಿಭಾಗವಾಗಿರುತ್ತದೆ ಎಂದರೆ ಸರಿಯಲ್ಲ. 1992 ರ ಪಾಲು ವಿಭಾಗದಂತೆ ನಮಗೆ ಬಂದ

ಪಾಲುಗಳ ಆಸ್ತಿಗಳಲ್ಲಿ ನಮ್ಮ ಹೆಸರುಗಳು ಪಹಣಿ ಪತ್ರಿಕೆಗಳಲ್ಲಿ ನಮೂದು ಆಗಿರುತ್ತವೆ ಎಂದರೆ ಸರಿಯಲ್ಲ. ದಾವಾ ಆಸ್ತಿಯ ಪಹಣಿ ಪತ್ರಿಕೆಗಳಲ್ಲಿ ನಮ್ಮ ಹೆಸರು ದಾಖಲಿರುವುದಿಲ್ಲ. ನಮ್ಮ ಹೆಸರು ಸುಮಾರು 15-20 ವರ್ಷಗಳಿಂದ ದಾವಾ ಆಸ್ತಿಯ ಪಹಣಿಗಳಲ್ಲಿ ಇರುವುದಿಲ್ಲ. ನಮ್ಮ ಹೆಸರು ನೊಂದಣಿಯಾಗದೆ ಇರುವ ಕುರಿತು ಎಂ.ಆರ್.ದಾಖಲೆಗಳನ್ನು ಪ್ರಶ್ನಿಸಿರುತ್ತೀರಾ ಎಂದರೆ ಸಾಕ್ಷಿಯು ಇಲ್ಲ ಎಂದು ನುಡಿಯುತ್ತಾರೆ. ನನ್ನನ್ನು ಹೊರತುಪಡಿಸಿ ನನ್ನ ಉಳಿದ ಸಹೋದರರು ಅವರ ಹೆಸರುಗಳು ದಾಖಲಾಗದೆ ಇರುವ ಕುರಿತು ಎಂ.ಆರ್. ದಾಖಲೆಗಳನ್ನು ಪ್ರಶ್ನಿಸಿರುವುದಿಲ್ಲ. 1992 ರಲ್ಲಿನ ಪಾಲು ವಿಭಾಗದ ಪ್ರಕಾರ ನಮಗೆ ಬಂದ ಆಸ್ತಿಗಳನ್ನು 1 ನೇ ಪ್ರತಿವಾದಿಗೆ ಮಾರಾಟ ಮಾಡಿರುತ್ತೇವೆ ಎಂದರೆ ಸರಿಯಲ್ಲ. ಆ ಕಾರಣ ಕೇವಲ ಸರ್ವೆ ನಂ.14/2 ರಲ್ಲಿ ಮಾತ್ರ ನನ್ನ ಹೆಸರು ಉಳಿದಿರುತ್ತದೆ, ಉಳಿದ ಆಸ್ತಿಗಳನ್ನು ಮಾರಾಟ ಮಾಡಿರುತ್ತೇವೆ ಎಂದರೆ ಸರಿಯಲ್ಲ. ನಿಪಿ-9 ರಲ್ಲಿರುವ ಸಹಿಯು ನನ್ನದೇ ಇರುತ್ತದೆ. ಅದೇ ರೀತಿ ನನ್ನ ಉಳಿದ ಸಹೋದರರ ಸಹಿಗಳೂ ಸಹ ನಿಪಿ-9 ರಲ್ಲಿ ಇರುತ್ತವೆ ಎಂದರೆ ಸರಿ. ನಿಪಿ-9 ರ ಪ್ರಕಾರ ನಮ್ಮ ಹೆಸರುಗಳನ್ನು ದಾವಾ ಆಸ್ತಿಗಳ ಪಹಣಿಗಳಲ್ಲಿ ತೆಗೆದು ಹಾಕಲಾಗಿದೆ ಎಂದರೆ ಸರಿಯಲ್ಲ , ಸಾಕ್ಷಿಯು ಮುಂದುವರೆದು ಮೋಸದಿಂದ ಮಾಡಿಸಿಕೊಂಡಿರುತ್ತಾರೆ ಎಂದು ನುಡಿಯುತ್ತಾರೆ. ಮೋಸ ಮಾಡಿರುತ್ತಾರೆ ಎಂಬ ಬಗ್ಗೆ ಪೊಲೀಸ್ ದೂರನ್ನು ನೀಡಿರುತ್ತೀರಾ ಎಂದರೆ ಸಾಕ್ಷಿಯು ಇಲ್ಲ ಎಂದು ನುಡಿಯುತ್ತಾರೆ. ನಿಪಿ-9 ರ ಪ್ರಕಾರ ನಿಪಿ-10 ರ ದಾಖಲೆಯನ್ನು ಕಂದಾಯ ಅಧಿಕಾರಿಗಳು ಮಾಡಿರುತ್ತಾರೆ ಮತ್ತು ನಮ್ಮ ಹೆಸರನ್ನು ದಾವಾ ಆಸ್ತಿಯ ಪಹಣಿಗಳಲ್ಲಿ ತೆಗೆದಿರುತ್ತಾರೆ ಎಂದರೆ ಸರಿಯಲ್ಲ. ನಿಪಿ-10 ರ ದಾಖಲೆಯನ್ನು ಈವರೆಗೂ ನಾವು ಎಲ್ಲಿಯೂ ಪ್ರಶ್ನಿಸಿರುವುದಿಲ್ಲ. ನಮ್ಮ ಸ್ವಖುಷಿಯಿಂದ ಮತ್ತು ಹಣವನ್ನು ಪಡೆದ ಕಾರಣ ನಿಪಿ .9 ಮತ್ತು 10 ರ ದಾಖಲೆಗಳನ್ನು ಪ್ರಶ್ನಿಸಿರುವುದಿಲ್ಲ ಎಂದರೆ ಸರಿಯಲ್ಲ . ಈಗ ನಾನು ಕೃಷಿ ಕೆಲಸವನ್ನು ಮಾಡುತ್ತೇನೆ . ಆ ಕಾರಣದಿಂದ ಸರ್ವೆ ನಂ.14/2 ರ ಆಸ್ತಿಯಲ್ಲಿನ ಪಾಲನ್ನು ಹೊರತುಪಡಿಸಿ ಬೇರೆ ಯಾವುದೇ

ಆಸ್ತಿಗಳಲ್ಲಿ ನಮಗೆ ಪಾಲು ಬರುವುದಿಲ್ಲ ಎಂದರೆ ಸರಿಯಲ್ಲ. ನನ್ನ ಹೆಸರು ಸರ್ವೆ ನಂ.14/2 ರಲ್ಲಿ ದಾಖಲಾಗಿರುತ್ತದೆ ಎಂದರೆ ಸರಿ. ಸದರಿ ಸರ್ವೆ ನಂ .14/2 ರ ಆಸ್ತಿಯನ್ನು ಇಟ್ಟುಕೊಂಡು ಉಳಿದ ಆಸ್ತಿಗಳನ್ನು ನಾನು ಮಾರಾಟ ಮಾಡಿರುತ್ತೇನೆ ಎಂದರೆ ಸರಿಯಲ್ಲ. ನಾನು ಆಸ್ತಿಗಳನ್ನು ಹೊಡೆದುಕೊಳ್ಳುವ ಉದ್ದೇಶದಿಂದ ನನಗೆ ಎಲ್ಲಾ ವಿಚಾರಗಳು ಗೊತ್ತಿದ್ದರೂ ಮತ್ತು ನನ್ನ ಪ್ರತಿವಾದ ಪತ್ರವನ್ನು ಸಲ್ಲಿಸದೆ ಸುಳ್ಳು ಸಾಕ್ಷ್ಯವನ್ನು ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

**3.** ನಮ್ಮ ತಂದೆಯವರು ಮೃತರಾದಾಗ ನನಗೆ ಎಷ್ಟು ವಯಸ್ಸು ಇತ್ತು ಎಂದು ನನಗೆ ಗೊತ್ತಿಲ್ಲ. ಆಗ ನನಗೆ ಸ್ವಲ್ಪ ಸ್ವಲ್ಪ ತಿಳುವಳಿಕೆ ಇತ್ತು. ಇಲ್ಲಿವರೆಗೂ ನಾನು ನಮ್ಮ ಮನೆತನಕ್ಕೆ ಸಂಬಂಧಪಟ್ಟ ಆಸ್ತಿಗಳಿಗೆ ಸಂಬಂಧಪಟ್ಟಂತೆ ಪಾಲು ವಿಭಾಗದ ದಾವೆಯನ್ನು ಸಲ್ಲಿಸಿರುವುದಿಲ್ಲ. ಅದೇ ರೀತಿ ನನ್ನ ಸಹೋದರರೂ ಸಹ ಪಾಲು ವಿಭಾಗದ ದಾವೆಯನ್ನು ದಾಖಲಿಸಿರುವುದಿಲ್ಲ ಎಂದರೆ ಸರಿ. 1992 ರಿಂದ ಸರ್ವೆ ನಂ.14/2 ರ ಆಸ್ತಿಯನ್ನು ಹೊರತುಪಡಿಸಿ ಬೇರೆ ಆಸ್ತಿಗಳು ನನ್ನ ಕಬ್ಜೆಯಲ್ಲಿ ಇಲ್ಲದೆ ಇದ್ದರೂ ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

**1 ಮತ್ತು 2 ನೇ ಪ್ರತಿವಾದಿಯರ ಪರ ವಕೀಲರು ಪಾಟೀ ಸವಾಲಿಗೆ ಸಮಯಾವಕಾಶ ಕೋರಿದ್ದು, ಸಮಯಾವಕಾಶ ನೀಡಲಾಯಿತು.**

**(ಸಾಕ್ಷಿಯ ಹೇಳಿಕೆಯನ್ನು ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಲಾಯಿತು)**

**ಓ.ಹೇ.ಕೇ ಸರಿಯಿದೆ.**

**Sd/-**

**3 ನೇ ಹೆಚ್ಚುವರಿ ಸಿವಿಲ್ ಮತ್ತು ಜೆಎಂಎಫ್‌ಸಿ ನ್ಯಾಯಾಧೀಶರು,**
**ಬೆಳಗಾವಿ.**